136

4. ದರಖಾಸ್ತಿನ ನಮೂನೆಗಳು ಇದರಡಿ ರುಜು ಮಾಡಿರುವವರಿಗೆ ಲಿಖಿತಮೂಲಕವಾಗಿಯಾಗಲಿ ಯಾ ರೂಬರೂ ಆಗಲಿ ಕೇಳಿ ಪಡೆಯಬಹುದು.

5. ದರಖಾಸ್ತುಗಳು 1896ನೇ ಅಕ್ಟೋಬರ್ 1ನೇ ತಾರೀಖಿನ ಮಧ್ಯಾನ್ಹದಲ್ಲಾಗಲಿ ಯಾ ತತ್ಪೂರ್ವದಲ್ಲಾಗಲಿ ಈ ಕೆಳಗೆ ರುಜು ಮಾಡಿರುವವರಿಗೆ ತಲ್ಪತಕ್ಕದ್ದು.

6. ಕಂಟ್ರಾಕ್ಟಿನ ವಿಶೇಷ ಸಂಗತಿಗಳು ಮತ್ತು ಷರತ್ತುಗಳು ಮೈಸೂರು ರೈಲ್ವೆಗಳ ಗವರ್ಣಮೆಂಟ್ ಸೆಕ್ರಿಟೆರಿಯವರ ಆಫಿಸಿನಲ್ಲಿ, ಆದಿತ್ಯವಾರಗಳು ಮತ್ತು ರಜಾ ದಿನಗಳು ಹೊರತಾಗಿ, 11 ಘಂಟೆಯಿಂದ 4 ಘಂಟೆ ವರಿಗಿನ ಮಧ್ಯೆ ಕಾಲಗಳಲ್ಲಿ ಪ್ರತಿದಿನವೂ ನೋಡಬಹುದು ಮತ್ತು ಸಮಾಚಾರ ಪಡೆಯಬಹುದು.

7. ಕಾಮುಗಾರಿಗಳ ವಿಶೇಷ ಸಂಗತಿಯ ಮತ್ತು ಕಂಟ್ರಾಕ್ಟಿನ ಷರತ್ತುಗಳ ಅಚ್ಚು ಹಾಕಲ್ಪಟ್ಟ ಪ್ರತಿಯು ಮೊದಲು ಹೇಳಿದ್ದಕ್ಕೆ ಹತ್ತು ರೂಪಾಯಿಗಳೂ ಮತ್ತು ತರುವಾಯ ಹೇಳಿದ್ದಕ್ಕೆ ಐದು ರೂಪಾಯಿಗಳೂ ತಲ್ಪಿದ ಮೇಲೆ ಕಳುಹಿಸಲ್ಪಡುವದು.

8. ಈ ಕೆಳಗೆ ರುಜು ಮಾಡಿರುವವರು ಕಮ್ಮಿಯಾದ ಯಾ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಹಾಗೆ ಮಾಡುವದಕ್ಕೆ ಕಾರಣಗಳು ತಿಳಿಸದೇನೇ ಉಳಿಸಿಕೊಂಡಿರುತ್ತಾರೆ.

ಹುಕುಂ ಬಮೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ್ ರೈಲ್ವೆಗಳ ಗವರ್ಣಮೆಂಟ್ ಸೆಕ್ರಿಟೆರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷನ್.

ನಂ. 387. ತಾರೀಖು 22ನೇ ಆಗಸ್ಟ್ 1896. ಮೊಕ್ಕಾಂ ಹರಿಹರ.

ಹರಿಹರ ಕಸಬಾದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಛತ್ರ ದೇವಸ್ಥಾನಗಳಿಗೆ ಮೊದಲು ಮೊಕರರ್ರಾಡಲ್ಪಟ್ಟಿರುವ 5 ಜನ ಧರ್ಮದರ್ಶಿಗಳಲ್ಲದೆ ಹರಿಹರದಲ್ಲಿರುವ ರಾಜನಹಳ್ಳಿ ಶಾನುಭೋಗ ನಾಡಿಗ ಬಾಲಕೃಷ್ಣರಾಯರನ್ನು ಸಹ ಧರ್ಮದರ್ಶಿಯಾಗಿ ನೇಮಿಸಿ ಯಿದೆ.

ಏ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂಪರ್ಟೆಂಡೆಂಟ್ ಮತ್ತು ಸೆಕ್ರಿಟೆರಿ.

ಮಿ ಲಿ ಟೆ ರಿ.

ಇನ್ವಿಸ್ಟಿಹಾರ್.

ತಾರೀಖು 8ನೇ ಸೆಪ್ಟಂಬರ್ 1896.

ಘನವನ್ನು ಹೊಂದಿನ ಶ್ರೀಮತ್ ಮಹಾರಾಜ್ಞೀ-ರೀಜಂಟರವರು, ಮೆಸ್ಟರ್ ಚಾವುಪ್ಪಾಜಿ ಅರಸಿನವರಿಗೆ ಘನವನ್ನು ಹೊಂದಿದ ಶ್ರೀಮತ್ ಮಹಾರಾಜರವರ ಬಾಡೀಗಾರ್ಡ್ ಜಮಾದಾರ್ರನ್ನಾಗಿ, 1896ನೇ ಸೆಪ್ಟಂಬರ್ ಗುರ್ರೇ ಲಾಗಾಯತು ಅಜಮಾಯಿಷೀ ತರೀಕ್ ಮೊಕರರ್ರಾಡಿರುತ್ತಾರೆ.

ಹುಕುಂ ಬಮೋಜೀಬ್,
ಏ. ಎಚ್. ಮೆಕ್ಕಿಂಟೈರ್, ಲೆಫ್ಟ್ನೆಂಟ್ ಕರ್ನಲ್,
ಮಿಲಿಟರಿ ಸೆಕ್ರಿಟೆರಿ.